**<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, 3 ನೇ ನ್ಯಾಯಾಲಯ, ಬೆಳಗಾವಿ</u>**

ಸಿ. ಸಿ. ನಂ : **1598/2022**
ಚಾಸಾ : **09** ಪ್ರಾಸಾ : **04**
ಪ್ರಮಾಣಿಕರಿಸಿದ ದಿನಾಂಕ : **08-04-2025**

| | | |
|---|---|---|
| ಹೆಸರು | : | ರಮೇಶ ಬಸವಣ್ಣೆಪ್ಪ ಬಡಕನ್ನವರ |
| ತಂದೆಯ ಹೆಸರು | : | ಬಸವಣ್ಣೆಪ್ಪ ಬಡಕನ್ನವರ |
| ವಯಸ್ಸು | : | **50** ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ | : | ಕರಡಿಗುದ್ಧಿ |

**<u>ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ. ಅವರಿಂದಃ</u>**

ಈಗ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಯ ಪರಿಚಯವಿರುವುದಿಲ್ಲ. ಚಾಸಾ 1 ಮತ್ತು 8 ಹಾಗೂ ಮೃತ ಕಾಶವ್ವ ಓಲೇಕರ ರವರ ಪರಿಚಯ ಇದೆ. ಈ ಪ್ರಕರಣದ ಬಗ್ಗ ನನಗೆ ಮಾಹಿತಿ ಇಲ್ಲ. ಯಾವುದೇ ಅಪಘಾತವನ್ನು ಕಣ್ಣಾರೆ ನೋಡಿರುವುದಿಲ್ಲ. ಸದರಿ ಅಪಘಾತವು ಯಾವ ವಾಹನದಿಂದ ಹೇಗೆ ಸಂಭವಿಸಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿರುವುದಿಲ್ಲ.

ಸಾಕ್ಷಿಗೆ ಅಪಘಾತಪಡಿಸಿದ ವಾಹನಗಳ ಪೋಟೋಗಳನ್ನು ತೋರಿಸಲಾಗಿ ನೋಡಿ ಗುರುತಿರುವುದಿಲ್ಲ, ಆದ ಕಾರಣ ಅವುಗಳನ್ನು ನಿಶಾನೆಯಾಗಿ ಗುರುತಿಸಿರುವುದಿಲ್ಲ .

**( ಈ ಹಂತದಲ್ಲಿ ಸಾಕ್ಷಿಯನ್ನು ಸ.ಸ.ಅ. ರವರ ಕೋರಿಕೆಯ ಮೇರೆಗೆ ಪ್ರತಿಕುಲ ಸಾಕ್ಷಿಯೆಂದು ಪರಿಗಣಿಸಿ , ಪಾಟೀಸವಾಲು ಮಾಡಲು ಸ. ಸ. ಅ. ರವರು ಅನುಮತಿ ಕೋರಿದ್ದು , ನೀಡಲಾಗಿರುತ್ತದೆ ).**

**<u>ಪಾಟೀಸವಾಲುಃ ಮಾನ್ಯ ಸ. ಸ. ಅ. ಅವರಿಂದಃ</u>**

ದಿನಾಂಕ 25-05-2022 ರಂದು ಮುಂಜಾನೆ 07.15 ಗಂಟೆಗೆ ನಮ್ಮ ಮನೆಯ ಮುಂದೆ ನಾನು ಮತ್ತು ಚಾಸಾ 8 ರವರು ಕೂಡಿಕೊಂಡು ಮಾತನಾಡುತ್ತಾ ನಿಂತಾಗ ಈಗ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತನು ತನ್ನ ಮೋಟಾರ್ ಸೈಕಲ್ ನಂಬರ KA-22/ಎಚಎ-4423 ನೇದ್ದನ್ನು ಬೆಳಗಾವಿ ಕಡೆಯಿಂದ ಬಾಗಲಕೋಟ ಕಡೆಗೆ ಅತೀ ವೇಗವಾಗಿ ಮತ್ತು ನಿಷ್ಕಾಳಜೀತನದಿಂದ ಮಾನವೀಯ ಜೀವಕ್ಕೆ ಅಪಾಯವಾಗುವ

ರೀತಿಯಲ್ಲಿ ಚಲಾಯಿಸಿಕೊಂಡು ಬಂದು ರಸ್ತೆ ದಂಡೆಯಿಂದ ನಡೆದುಕೊಂಡು ಹೊರಟ್ಟಿದ ಮೃತ ಕಾಶವ್ವ ಓಲೇಕರ ಕಡೆ ಗಮನ ಕೊಡದೆ ಹಿಂದಿನಿಂದ ಹಾಯಿಸಿದ್ದು, ಸದರಿ ಘಟನೆಯನ್ನು ನಾನು ಕಣ್ಣಾರೆ ಕಂಡಿರುತ್ತೇನೆ ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಅಪಘಾತದಿಂದ ಮೃತ ಕಾಶವ್ವ ಇವರ ತಲೆಗೆ, ಹಣೆಗೆ ಮತ್ತು ಕಾಲುಗಳಿಗೆ ಗಾಯವಾಗಿ ರಕ್ತ ಬರುತ್ತಿದ್ದು, ನಾವು ಮತ್ತು ಕೂಡಿದ ಜನರು ಆಕೆಗೆ ನೀರು ಕುಡಿಸಿ ಅಂಬುಲೆನ್ಸ ಗಾಡಿಗೆ ಫೋನ ಮಾಡಿ ಉಪಚಾರಕ್ಕಾಗಿ ವಿಜಯಾ ಆಸ್ಪತ್ರೆಗೆ ಕಳುಹಿಸಿಕೊಟ್ಟೆವು ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಅಪಘಾತಪಡಿಸಿದ ವಾಹನದ ಸವಾರನದ ಆರೋಪಿತನ ಹೆಸರು ಮತ್ತು ವಿಳಾಸ ತಿಳಿದು ಬಂದಿರುತ್ತದೆ ಎಂದರೆ ಸರಿಯಲ್ಲ.

ದಿನಾಂಕ 25-05-2022 ರಂದು ಮುಂಜಾನೆ 11.00 ಗಂಟೆಗೆ ಚಿಕಿತ್ಸೆ ಫಲಕಾರಿಯಾಗದೆ ಕಾಶವ್ವ ಓಲೇಕರ ಇವರು ಮೃತಪಟ್ಟಿರುತ್ತಾರೆ ಎಂದು ನನಗೆ ತಿಳಿದು ಬಂದಿರುತ್ತದೆ ಎಂದರೆ ಸರಿಯಲ್ಲ. ಈ ಕುರಿತು ನಾನು ದಿನಾಂಕ 26-05-2022 ರಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

ಸಾಕ್ಷಿಯು ನಿರಾಕರಿಸಿದ ಹೇಳಿಕೆಯನ್ನು ನಿ ಪಿ 7 ಎಂದು ಗುರುತಿಸಲಯಿತು. ನಿ ಪಿ 7 ರಲ್ಲಿರುವ ಸಂಗತಿಗಳು ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಮಾನ್ಯ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

**ಪಾಟೀ ಸವಾಲುಃ ಶ್ರೀ ಎನ್ ಎನ್ ಪಿ ಆರೋಪಿ ಪರ ವಕೀಲರಿಂದಃ**

ಆರೋಪಿಪರ ವಕೀಲರು ಪಾಟೀ ಸವಾಲು ಇಲ್ಲಾ ಎಂದು ನುಡಿದ ಮೇರೆಗೆ ಪಾಟೀ ಸವಾಲನ್ನು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು .

( ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು )

**ಓ.ಹೇ.ಕೇ.ಸರಿ.ಇದೆ.**

**ಸಹಿ/-**

**3 ನೇ ಪ್ರ.ದ.ನ್ಯಾ .ದಂ.ಗಳು,ಬೆಳಗಾವಿ**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, 3 ನೇ ನ್ಯಾಯಾಲಯ, ಬೆಳಗಾವಿ**

ಸಿ. ಸಿ. ನಂ : **1598/2022**
ಚಾಸಾ : **08** ಪ್ರಾಸಾ : **03**
ಪ್ರಮಾಣಿಕರಿಸಿದ ದಿನಾಂಕ : **08-04-2025**

| | | |
|---|---|---|
| ಹೆಸರು | : | ಸದಾನಂದ ಚನ್ನಬಸಪ್ಪ ರಾಚನ್ನವರ |
| ತಂದೆಯ ಹೆಸರು | : | ಚನ್ನಬಸಪ್ಪ ರಾಚನ್ನವರ |
| ವಯಸ್ಸು | : | **46** ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ | : | ಕರಡಿಗುದ್ದಿ |

**ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ. ಅವರಿಂದಃ**

ಈಗ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಯ ಪರಿಚಯವಿರುವುದಿಲ್ಲ. ಚಾಸಾ 1 ಮತ್ತು 9 ಹಾಗೂ ಮೃತ ಕಾಶವ್ವ ಓಲೇಕರ ರವರ ಪರಿಚಯ ಇದೆ. ಈ ಪ್ರಕರಣದ ಬಗ್ಗ ನನಗೆ ಮಾಹಿತಿ ಇಲ್ಲ. ಯಾವುದೇ ಅಪಘಾತವನ್ನು ಕಣ್ಣಾರೆ ನೋಡಿರುವುದಿಲ್ಲ. ಸದರಿ ಅಪಘಾತವು ಯಾವ ವಾಹನದಿಂದ ಹೇಗೆ ಸಂಭವಿಸಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿರುವುದಿಲ್ಲ.

ಸಾಕ್ಷಿಗೆ ಅಪಘಾತಪಡಿಸಿದ ವಾಹನಗಳ ಫೋಟೋಗಳನ್ನು ತೋರಿಸಲಾಗಿ ನೋಡಿ ಗುರುತಿರುವುದಿಲ್ಲ, ಆದ ಕಾರಣ ಅವುಗಳನ್ನು ನಿಶಾನೆಯಾಗಿ ಗುರುತಿಸಿರುವುದಿಲ್ಲ .

**( ಈ ಹಂತದಲ್ಲಿ ಸಾಕ್ಷಿಯನ್ನು ಸ.ಸ.ಅ. ರವರ ಕೋರಿಕೆಯ ಮೇರೆಗೆ ಪ್ರತಿಕುಲ ಸಾಕ್ಷಿಯೆಂದು ಪರಿಗಣಿಸಿ , ಪಾಟೀಸವಾಲು ಮಾಡಲು ಸ. ಸ. ಅ. ರವರು ಅನುಮತಿ ಕೋರಿದ್ದು , ನೀಡಲಾಗಿರುತ್ತದೆ ).**

**ಪಾಟೀಸವಾಲುಃ ಮಾನ್ಯ ಸ. ಸ. ಅ. ಅವರಿಂದಃ**

ದಿನಾಂಕ 25-05-2022 ರಂದು ಮುಂಜಾನೆ 07.15 ಗಂಟೆಗೆ ನಮ್ಮ ಮನೆಯ ಮುಂದೆ ನಾನು ಮತ್ತು ಚಾಸಾ 9 ರವರು ಕೂಡಿಕೊಂಡು ಮಾತನಾಡುತ್ತಾ ನಿಂತಾಗ ಈಗ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತನು ತನ್ನ ಮೋಟಾರ್ ಸೈಕಲ್ ನಂಬರ KA-22/ಎಚಎ-4423 ನೇದ್ದನ್ನು ಬೆಳಗಾವಿ ಕಡೆಯಿಂದ ಬಾಗಲಕೋಟ ಕಡೆಗೆ ಅತೀ ವೇಗವಾಗಿ ಮತ್ತು ನಿಷ್ಕಾಳಜೀತನದಿಂದ ಮಾನವೀಯ ಜೀವಕ್ಕೆ ಅಪಾಯವಾಗುವ

ರೀತಿಯಲ್ಲಿ ಚಲಾಯಿಸಿಕೊಂಡು ಬಂದು ರಸ್ತೆ ದಂಡೆಯಿಂದ ನಡೆದುಕೊಂಡು ಹೊರಟ್ಟಿದ ಮೃತ ಕಾಶವ್ವ ಓಲೇಕರ ಕಡೆ ಗಮನ ಕೊಡದೆ ಹಿಂದಿನಿಂದ ಹಾಯಿಸಿದ್ದು, ಸದರಿ ಘಟನೆಯನ್ನು ನಾನು ಕಣ್ಣಾರೆ ಕಂಡಿರುತ್ತೇನೆ ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಅಪಘಾತದಿಂದ ಮೃತ ಕಾಶವ್ವ ಇವರ ತಲೆಗೆ, ಹಣೆಗೆ ಮತ್ತು ಕಾಲುಗಳಿಗೆ ಗಾಯವಾಗಿ ರಕ್ತ ಬರುತ್ತಿದ್ದು, ನಾವು ಮತ್ತು ಕೂಡಿದ ಜನರು ಆಕೆಗೆ ನೀರು ಕುಡಿಸಿ ಅಂಬುಲೆನ್ಸ ಗಾಡಿಗೆ ಫೋನ ಮಾಡಿ ಉಪಚಾರಕ್ಕಾಗಿ ವಿಜಯಾ ಆಸ್ಪತ್ರೆಗೆ ಕಳುಹಿಸಿಕೊಟ್ಟೆವು ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಅಪಘಾತಪಡಿಸಿದ ವಾಹನದ ಸವಾರನದ ಆರೋಪಿತನ ಹೆಸರು ಮತ್ತು ವಿಳಾಸ ತಿಳಿದು ಬಂದಿರುತ್ತದೆ ಎಂದರೆ ಸರಿಯಲ್ಲ.

ದಿನಾಂಕ 25-05-2022 ರಂದು ಮುಂಜಾನೆ 11.00 ಗಂಟೆಗೆ ಚಿಕಿತ್ಸೆ ಫಲಕಾರಿಯಾಗದೆ ಕಾಶವ್ವ ಓಲೇಕರ ಇವರು ಮೃತಪಟ್ಟಿರುತ್ತಾರೆ ಎಂದು ನನಗೆ ತಿಳಿದು ಬಂದಿರುತ್ತದೆ ಎಂದರೆ ಸರಿಯಲ್ಲ. ಈ ಕುರಿತು ನಾನು ದಿನಾಂಕ 26-05-2022 ರಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

ಸಾಕ್ಷಿಯು ನಿರಾಕರಿಸಿದ ಹೇಳಿಕೆಯನ್ನು ನಿ ಪಿ 6 ಎಂದು ಗುರುತಿಸಲಯಿತು . ನಿ ಪಿ 6 ರಲ್ಲಿರುವ ಸಂಗತಿಗಳು ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಮಾನ್ಯ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

**ಪಾಟೀ ಸವಾಲುಃ ಶ್ರೀ ಎನ್ ಎನ್ ಪಿ ಆರೋಪಿ ಪರ ವಕೀಲರಿಂದಃ**

ಆರೋಪಿಪರ ವಕೀಲರು ಪಾಟೀ ಸವಾಲು ಇಲ್ಲಾ ಎಂದು ನುಡಿದ ಮೇರೆಗೆ ಪಾಟೀ ಸವಾಲನ್ನು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು .

( ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು )

**ಓ.ಹೇ.ಕೇ.ಸರಿ.ಇದೆ.**

**ಸಹಿ/-**

**3 ನೇ ಪ್ರ.ದ.ನ್ಯಾ .ದಂ.ಗಳು,ಬೆಳಗಾವಿ**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, 3ನೇ ನ್ಯಾಯಾಲಯ, ಬೆಳಗಾವಿ**

**ಸಿ. ಸಿ. ನಂ : 1598/2022**
ಚಾಸಾ : 03 ಪ್ರಾಸಾ : 02
ಪ್ರಮಾಣಿಕರಿಸಿದ ದಿನಾಂಕ : 08-04-2025

| | | |
|---|---|---|
| ಹೆಸರು | : | ಶಂಕರಗೌಡ ಮುದಗೌಡ ಪಾಟೀಲ |
| ತಂದೆಯ ಹೆಸರು | : | ಮುದಗೌಡ ಪಾಟೀಲ |
| ವಯಸ್ಸು | : | **59** ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ | : | ಕರಡಿಗುದ್ದಿ |

**ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ. ಅವರಿಂದಃ**

ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿತನ, ಚಾಸಾ 1, 2, 8 ಮತ್ತು 9 ಹಾಗೂ ಮೃತ ಕಾಶವ್ವ ಓಲೇಕರ ರವರ ಪರಿಚಯ ಇದೆ. ಈ ಅಪಘಾತ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಸುಮಾರು 3 ವರ್ಷಗಳ ಹಿಂದೆ ಚಾಸಾ 1 ರವರ ಮನೆ ಕಡೆಗೆ ಹೋದಾಗ ಫೋಟೋ ತೆಗೆಯುತ್ತಿದ್ದರು ಮತ್ತು ಆ ಸಮಯದಲ್ಲಿ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಸದರಿ ದಾಖಾತಿಗಳಲ್ಲಿ ಬರೆದ ಸಂಗತಿಗಳು ನನಗೆ ಗೊತ್ತಿಲ್ಲ. ಪೋಲಿಸರು ನನಗೆ ಮತ್ತು ಚಾಸಾ-2 ರವರನ್ನು ಎಲ್ಲಿಗೂ ಕರೆದುಕೊಂಡು ಹೋಗಿರುವುದಿಲ್ಲ. ನಮ್ಮ ಸಮಕ್ಷಮ ಅಪಘಾತ ಸ್ಥಳದ ಪಂಚನಾಮೆಯನ್ನು ಮತ್ತು ವಾಹನ ಸ್ಥಿತಿಗತಿ ಪಂಚನಾಮೆಯನ್ನು ಜರುಗಿಸಿರುವುದಿಲ್ಲ .

ಈಗ ಸಾಕ್ಷಿಗೆ ಅಪಘಾತ ಸ್ಥಳದ ಪಂಚನಾಮೆಯನ್ನು ತೋರಿಸಲಾಗಿ , ಸಾಕ್ಷಿಯ ಅದರಲ್ಲಿಯ ತನ್ನ ಸಹಿ ನೋಡಿ ಗುರುತಿಸಿರುತ್ತಾರೆ . ಸದರಿ ಪಂಚನಾಮೆಯನ್ನು ನಿ ಪಿ 4 ಎಂದು ಗುರುತಿಸಿ, ಸಾಕ್ಷಿಯ ಸಹಿಯನ್ನು ನಿಪಿ-4 (ಎ ) ಎಂದು ಗುರುತಿಸಲಾಯಿತು.

ಈಗ ಸಾಕ್ಷಿಗೆ ವಾಹನ ಸ್ಥಿತಿಗತಿ ಪಂಚನಾಮೆಯನ್ನು ತೋರಿಸಲಾಗಿ , ಸಾಕ್ಷಿಯ ಅದರಲ್ಲಿಯ ತನ್ನ ಸಹಿ ನೋಡಿ ಗುರುತಿಸಿರುತ್ತಾರೆ. ಸದರಿ ಪಂಚನಾಮೆಯನ್ನು ನಿ ಪಿ 5 ಎಂದು ಗುರುತಿಸಿ, ಸಾಕ್ಷಿಯ ಸಹಿಯನ್ನು ನಿಪಿ-5(ಎ ) ಎಂದು ಗುರುತಿಸಲಾಯಿತು .

ಈಗ ಸಾಕ್ಷಿಗೆ ನಿ ಪಿ 4 ನ್ನು ಜರುಗಿಸುವ ಕಾಲಕ್ಕೆ ತೆಗೆದ ಫೋಟೋವನ್ನು ತೋರಿಸಲಾಗಿ, ಸಾಕ್ಷಿ ನೋಡಿ ಅದರಲ್ಲಿ ತಾನು ಇರುವುದನ್ನು ಗುರುತಿಸುತ್ತಾರೆ. ಆದರೆ ಸದರಿ ಫೋಟೋ ಏಕೆ ಮತ್ತು ಯಾವಾಗ ತೆಗೆದಿದ್ದರು ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಈಗ ಸಾಕ್ಷಿಗೆ ನಿ ಪಿ 5 ನ್ನು ಜರುಗಿಸುವ ಕಾಲಕ್ಕೆ ತೆಗೆದ ಎರಡು ಫೋಟೋಗಳನ್ನು ತೋರಿಸಲಾಗಿ, ಸಾಕ್ಷಿ ನೋಡಿ ಗುರುತಿಸಿರುವುದಿಲ್ಲ. ಸದರಿ ಫೋಟೋಗಳ ಪೂರಕವಾಗಿ ಪ್ರಮಾಣ ಪತ್ರ ಇದರ ಕಾರಣ ನಿಶಾನೆ ಮಾಡಿರುವುದಿಲ್ಲ.

**( ಈ ಹಂತದಲ್ಲಿ ಸಾಕ್ಷಿಯನ್ನು ಸ.ಸ.ಅ. ರವರ ಕೋರಿಕೆಯ ಮೇರೆಗೆ ಪ್ರತಿಕುಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಸ. ಸ. ಅ. ರವರು ಅನುಮತಿ ಕೋರಿದ್ದು , ನೀಡಲಾಗಿರುತ್ತದೆ)**

**<u>ಪಾಟೀ ಸವಾಲುಃ ಮಾನ್ಯ ಸ. ಸ. ಅ. ಅವರಿಂದಃ</u>**

ದಿನಾಂಕ 26-05-2022 ರಂದು ಚಾಸಾ 19 ರವರು ನನ್ನನ್ನು ಮತ್ತು ಚಾಸಾ -2 ರವರನ್ನು ಕರಡಿಗುದ್ದಿ ಗ್ರಾಮದ ಬಸ್ಸ ನಿಲ್ದಾಣದ ಕಟ್ಟಡದ ಮುಂದೆ ಹಾಯ್ದು ಹೋಗಿರುವ ಬೆಳಗಾವಿ-ಬಾಗಲಕೋಟ ರಸ್ತೆಯ ಮೇಲೆ ಕರೆಯಿಸಿ, ಚಾಸಾ 1 ರವರು ತೋರಿಸಿದ ಜಾಗೆಯಲ್ಲಿ ನಿ.ಪಿ-4 ರಂತೆ ನಮ್ಮ ಸಮಕ್ಷಮ ಅಪಘಾತ ಸ್ಥಳದ ಪಂಚನಾಮೆಯನ್ನು ಸಮಯ 10.00 ರಿಂದ 11.00 ಗಂಟೆವರೆಗೆ ಬರೆದು ನಮಗೆ ಓದಿ, ಹೇಳಿ ನಮ್ಮ ಸಹಿಗಳು ಪಡೆದಿರುತ್ತಾರೆ ಎಂದರೆ ಸರಿಯಲ್ಲ .

ಅದೇ ದಿನ ಚಾಸಾ 19 ರವರು ನನ್ನನ್ನು ಮತ್ತು ಚಾಸಾ -2 ರವರನ್ನು ಮಾರಿಹಾಳ ಪೊಲೀಸ ಠಾಣೆಗೆ ಕರೆಯಿಸಿ, ಅಲ್ಲಿ ಹಾಜರುಪಡಿಸಿದ ಅಪಘಾತಪಡಿಸಿದ ಮೋಟರ ಸೈಕಲ್ ನೇದ್ದರ ಸ್ಥಿತಿಗತಿ ಪಂಚನಾಮೆಯನ್ನು ನಿ.ಪಿ-5 ರಂತೆ ನಮ್ಮ ಸಮಕ್ಷಮ ಸಮಯ 13.00 ರಿಂದ 13.30 ಗಂಟೆವರೆಗೆ ಬರೆದು ನಮಗೆ ಓದಿ, ಹೇಳಿ ನಮ್ಮ ಸಹಿಗಳು ಪಡೆದಿರುತ್ತಾರೆ ಎಂದರೆ ಸರಿಯಲ್ಲ . ನಿಪಿ - 4 ಮತ್ತು 5 ರಲ್ಲಿ ಬರೆದಿರುವ ಸಂಗತಿಗಳು ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

**<u>ಪಾಟೀ ಸವಾಲುಃ ಶ್ರೀ ಎನ್ ಎಮ್ ಪಿ ಆರೋಪಿ ಪರ ವಕೀಲರಿಂದಃ</u>**

ಆರೋಪಿಪರ ವಕೀಲರು ಪಾಟೀ ಸವಾಲು ಇಲ್ಲಾ ಎಂದು ನುಡಿದ ಮೇರೆಗೆ ಪಾಟೀ ಸವಾಲನ್ನು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು .

**<u>ಮರು ವಿಚಾರಣೆಃ</u>** ಇಲ್ಲಾ .

( ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು )

**ಓ.ಹೇ.ಕೇ.ಸರಿ.ಇದೆ.**

**ಸಹಿ/-**

**3 ನೇ ಪ್ರ.ದ.ನ್ಯಾ.ದಂ.ಗಳು,ಬೆಳಗಾವಿ**